**Independence Day celebration at ICAR- Directorate of Cashew Research, Puttur**

The $74^{th}$ Independence Day celebration was held at the ICAR- Directorate of Cashew Research, Puttur at Mottettadka, Puttur. At 8.55 in the morning, the Director of the Institute, Dr. Mr. Gangadhar Nayak hoisted the national flag and delivered Independence day message. He said that the country is now on the development track and we as citizens need to work towards this cause. In addition, he mentioned that recent internal strife and riots have been handled by governments very effectively and this again requires the cooperation of the people.

Highlighting the achievements of the institute, he said that the Directorate has made a lot of progress recently. Especially the world-class cashew Museum has been set up here. In addition, we have also developed the unique and worldwide applicable "Cashew India" andorid app. It is useful for cashew farmers and stakeholders, he said. He said that a state-of-the-art laboratory under the sponsorship of RKVY has been set up in the institute. He added that for cashew area expansion in Shirmoga, Chitradurga, Dakshina Kannada and Udupi districts, the institute has received RKVY grants. In addition, the institute's proud silver jubilee building is all set to open. He said more work needs to be done for the development of the institute. At the same time, the he congratulated the entire scientist, technical and supporting staff for these achievements.

The event was attended by all scientists, technical officers, administrative officers and staff members of the organization and other employees.






# ಮೊಟ್ಟೆತ್ತಡ್ಕ ಡಿಸಿಆರ್ ನಲ್ಲಿ ಸ್ವಾತಂತ್ರ್ಯ ದಿನಾಚರಣೆ

ಪುತ್ತೂರಿನ ಮೊಟ್ಟೆತಡ್ಕದಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಸಂಭ್ರಮದ ೭೪ನೇ ಸ್ವಾತಂತ್ರೋತ್ಸವವನ್ನು ಆಚರಿಸಲಾಯಿತು.

ಬೆಳಿಗ್ಗೆ 8.55ಕ್ಕೆ ಸರಿಯಾಗಿ ಧ್ವಜಾರೋಹಣವನ್ನು ಸಂಸ್ಥೆಯ ನಿರ್ದೇಶಕರಾದ ಡಾ. ಯಂ.ಗಂಗಾಧರ ನಾಯಕ್ ರವರು ನೆರವೇರಿಸಿದ ಬಳಿಕ ನೆರೆದವರನ್ನು ಉದ್ದೇಶಿಸಿ ಸ್ವಾತಂತ್ರೋತ್ಸವದ ಸಂದೇಶವನ್ನು ನೀಡಿದರು. ದೇಶ ಈಗ ಅಭಿವೃದ್ಧಿಪಥದಲ್ಲಿದೆ ಕೋವಿಡ್ ರೋಗ ಹಾಗೂ ಚೀನಾದ ಆಕ್ರಮಣವನ್ನು ದೇಶ ಅತ್ಯಂತ ಸಮರ್ಥವಾಗಿ ನಿಭಾಯಿಸಿದೆ. ಇದಕ್ಕೆ ಪ್ರಜೆಗಳಾದ ನಾವು ನಮ್ಮ ಜವಾಬ್ದಾರಿಯನ್ನರಿತು ಕೆಲಸ ಮಾಡಬೇಕು ಎಂದರು. ಜೊತೆಗೆ ಆಂತರಿಕ ಕಲಹ, ಗಲಭೆ ಇವನ್ನೆಲ್ಲಾ ಅತ್ಯಂತ ಪರಿಣಾಮಕಾರಿಯಾಗಿ ಸರಕಾರಗಳು ನಿರ್ವಹಿಸಿವೆ. ಇದಕ್ಕೆ ಜನರ ಸಹಕಾರ ಅಗತ್ಯ ಎಂದರು.

ಮುಂದುವರಿದು ರಾಷ್ಟ್ರೀಯ ಗೇರು ಸಂಶೋಧನಾ ಕೇಂದ್ರ ಇತ್ತೀಚೆಗೆ ಸಾಕಷ್ಟು ಸಾಧನೆಗಳನ್ನು ಮಾಡಿದೆ. ವಿಶೇಷವಾಗಿ ವಿಶ್ವಮಟ್ಟದ ಗೇರು ಮ್ಯೂಸಿಯಂನ್ನು ಇಲ್ಲಿ ರೂಪಿಸಿದ್ದೇವೆ. ಜೊತೆಗೆ ಗೇರು ಬೆಳೆಯುವ ಹತ್ತು ರಾಜ್ಯಗಳಿಗೆ ಹನ್ನೊಂದು ಭಾಷೆಗಳಲ್ಲಿ ಅನುವಾಗುವ ಹಾಗೆ 'ಕ್ಯಾಶ್ಯೂ ಇಂಡಿಯಾ' ಆಪ್ ನ್ನು ಅಭಿವೃದ್ಧಿಪಡಿಸಿದ್ದೇವೆ. ಇದು ರೈತರಿಗೆ ಉಪಯುಕ್ತ ಎಂದರು. ಹಾಗೇ ಆರ್ಕೆವಿವೈ ಪ್ರಾಯೋಜನೆಯಡಿಯಲ್ಲಿ ಅತ್ಯಾಧುನಿಕ ಪ್ರಯೋಗಾಲಯವನ್ನೂ ಅಭಿವೃದ್ಧಿಪಡಿಸಿದ್ದೇವೆ. ಜೊತೆಗೆ ಗೇರು ಕೃಷಿ ವಿಸ್ತರಣೆಗೆ ಶಿವಮೊಗ್ಗ, ಚಿತ್ರದುರ್ಗ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ಆರ್ಕೆವಿವೈ ಅನುದಾನ ದೊರೆತಿದೆ ಎಂದರು. ಇವೆಲ್ಲದರ ಜೊತೆಗೆ ಸಂಸ್ಥೆಯ ಹೆಮ್ಮೆಯಾದ ರಜತ ಮಹೋತ್ಸವ ಕಟ್ಟಡ ಪ್ರಾರಂಭವಾಗಲು ಸಿದ್ಧವಾಗಿದೆ.ಇವೆಲ್ಲಾ ಇತ್ತೀಚಿನ ವರ್ಷಗಳಲ್ಲಿ ಸಂಸ್ಥೆ ಸಾಕಷ್ಟು ಸಾಧನೆ ಮಾಡಿದ ಕುರುಹುಗಳು. ಇನ್ನಷ್ಟು ಸಾಧನೆ ಮಾಡಬೇಕಿದೆ ಎಂದರು. ಇದೇ ಸಂದರ್ಭದಲ್ಲಿ ಈ ಸಾಧನೆಗಳನ್ನು ಮಾಡಲು ಅನುವಾದ ಎಲ್ಲಾ ವಿಜ್ಞಾನಿ, ತಾಂತ್ರಿಕ ಹಾಗೂ ಸಹಾಯಕ ಸಿಬ್ಬಂದಿಗಳನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಎಲ್ಲಾ ವಿಜ್ಞಾನಿಗಳು, ತಾಂತ್ರಿಕ ಅಧಿಕಾರಿಗಳು, ಆಡಳಿತ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ, ಇತರ ನೌಕರರು, ಗುತ್ತಿಗೆದಾರರು ಹಾಗೂ ಆಧಾರದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ನೌಕರರು ಸೇರಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.